ಅಸಲು ದಾವಾಃ- 34/2018 ಪಿ.ಡಬ್ಲ್ಯೂಃ- 1

ದಿನಾಂಕಃ 15.07.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ಜಿ ಪಿ ಎ ಹೋಲ್ಡರ್ ರವರಿಂದ ಃ-

ನನ್ನ ತಂದೆ-ತಾಯಿ ನನಗೆ ಬಳುವಳಿ ಪತ್ರ ಮಾಡಿಕೊಟ್ಟಿದ್ದೆ ಆದರೆ ಅದರ ಪ್ರಕಾರ ಸದರಿ ಆಸ್ತಿಯು ನನ್ನ ಹೆಸರಿಗೆ ಖಾತೆ ಮಾಡಿಕೊಳ್ಳಲು ನನಗೆ ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ. ತೊಂದರೆ ಇಲ್ಲದೇ ಇದ್ದಿದ್ದರಿಂದ ಜಮೀನಿನ ಖಾತೆಯನ್ನು ನನ್ನ ಹೆಸರಿಗೆ ಯಾಕೆ ಮಾಡಿಕೊಳ್ಳಲಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖಾತೆ ಮಾಡಿಕೊಳ್ಳಲು ಗೊತ್ತಿಲ್ಲದೇ ಇದ್ದಾಗ ಈ ದಾವೆಯನ್ನು ಯಾಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿಗೆ ಇದ್ದಿದ್ದರಿಂದ ನಾವು ಹಾಗೇ ಬಿಟ್ಟಿದ್ದೆವು ಎಂದು ನುಡಿಯುತ್ತಾರೆ. ನಿಪಿ 7 ಬಳುವಳಿ ಪತ್ರವನ್ನು ಯಾಕೆ ನೋಂದಣಿ ಮಾಡಿಸಿಲ್ಲ ಎಂದರೆ ನನಗೆ ಆ ಸಮಯದಲ್ಲಿ ಗೊತ್ತಾಗಿಲ್ಲ ಎಂದು ನುಡಿಯುತ್ತಾರೆ.

ಯಾವ ಜಮೀನಿನ ಎಷ್ಟು ಎಕರೆ ಜಮೀನನ್ನು ನಮ್ಮ ತಂದೆ ತಾಯಿಯವರು ನನಗೆ ಬಳುವಳಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರ್ವೆ ನಂ.87 ರಲ್ಲಿ 1 ಎಕರೆ 37 ಗುಂಟೆ, ಸರ್ವೆ ನಂ.60 ರಲ್ಲಿ 8 ಗುಂಟೆ ಎಂದು ನುಡಿಯುತ್ತಾರೆ. ಸರ್ವೆ ನಂ.87 ರಲ್ಲಿ 1 ಎಕರೆ 37 ಗುಂಟೆಯನ್ನು ನನ್ನ ತಂದೆ ತಾಯಿಯವರು ಬಳುವಳಿ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ಸಾಗುವಳಿ ಮಾಡಲು ದಾವಾ ಸ್ವತ್ತುಗಳನ್ನು ಯಾವಾಗ ನೀಡಿದ್ದೇನೆ ಎಂದರೆ ನೆನಪಿಲ್ಲ. ದಾವಾ ಸ್ವತ್ತಿನ ದಾಖಲೆಗಳಲ್ಲಿ ಕಂದಾಯ ಪ್ರಾಧಿಕಾರದಲ್ಲಿ ಇತ್ತೀಚೆಗೆ ಪಡೆದುಕೊಂಡಿರುತ್ತೇನೆ ಎಂದು ವಾದಪತ್ರದ ಕಂಡಿಕೆ 5 ರಲ್ಲಿ ತಿಳಿಸಿದ್ದು ಯಾವ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಗೊತ್ತಿಲ್ಲ. ದಿಃ 11.04.2017 ರಂದು ಪ್ರತಿವಾದಿಗಳಿಗೆ ನೋಟೀಸ್ ನೀಡಿದ್ದೇನೆ ಎಂದು ಹೇಳಿದ್ದು ಸದರಿ ನೋಟೀಸ್ ನಲ್ಲಿ ಯಾವ ಜಮೀನುಗಳಿಗೆ ಸಂಬಂಧಿಸಿದಂತೆ ನೋಟೀಸ್ ನೀಡಿದ್ದೇನೆ ಎಂದು ನಮೂದಿಸಿದ್ದೇನೆ ಎಂದರೆ ಸರ್ವೆ ನಂ.87. ದಾವಾ ಐಟಂ ನಂ.2 ರ ಆಸ್ತಿಯು

ನಮ್ಮ ಹೆಸರಿಗೆ ಇದೆ ಎಂದು ತೋರಿಸಲು ಯಾವುದಾದರೂ ಪಹಣಿ ಮ್ಯುಟೇಷನ್ ಇದೆಯಾ ಎಂದರೆ ಇದೆ.

ಸರ್ವೆ ನಂ.60 ರಲ್ಲಿ 6 ಎಕರೆ ಪೈಕಿ 2 ಎಕರೆ ಜಮೀನನ್ನು ನನ್ನ ತಂದೆ ತಾಯಿಗಳು ನಿಪಿ 7 ರಂತೆ ಬಳುವಳಿ ನೀಡಿದ್ದಾರೆ ಎಂದು ಹೇಳಿದ್ದು ಸರ್ವೆ ನಂ.60 ರಲ್ಲಿ 6 ಎಕರೆ ಜಮೀನು ಇದೆ ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. ಸರ್ವೆ ನಂ.60 ರಲ್ಲಿ 6 ಎಕರೆ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಪಹಣಿ ಹಾಜರುಪಡಿಸುತ್ತಿರಾ ಎಂದರೆ ಸಾಕ್ಷಿಯು ನನಗೆ 2 ಎಕರೆ ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.60 ರಲ್ಲಿ 6 ಎಕರೆ ಜಮೀನು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ರೀತಿ ಸರ್ವೆ ನಂಬರ್ 60 ರಲ್ಲಿ 6 ಎಕರೆ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಲು ಆಗುತ್ತದಾ ಎಂದರೆ ಇಲ್ಲ. ಹಾಗಾದರೆ ನಿಪಿ 7 ಬಳುವಳಿ ಪತ್ರ ಸುಳ್ಳಾ ಎಂದರೆ ಸಾಕ್ಷಿಯು ಸರಿ ಇದೆ ಎಂದು ನುಡಿಯುತ್ತಾರೆ. ನಿಪಿ 7 ಬಳುವಳಿ ಪತ್ರದಲ್ಲಿ ದಾವಾ ಐಟಂ ನಂ.1 ರ ಆಸ್ತಿಯ ನಮೂದು ಇಲ್ಲದೇ ಇದ್ದರೂ ಸಹ ದಾವಾ ಐಟಂ ನಂಬರ್ 1 ರ ಮೇಲೆ ಯಾಕೆ ದಾವೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಒಟ್ಟು 2 ಎಕರೆಗೆ ದಾವೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 8 ನೋಟೀಸಿಗೂ ದಾವಾ ಆಸ್ತಿಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಮೇಲೆ ನಮ್ಮ ಮಾಲೀಕತ್ವ ತೋರಿಸಲು ನ್ಯಾಯಾಲಯಕ್ಕೆ ಯಾವ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಬಳುವಳಿ ಪತ್ರ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ನಾನೇ ಸಾಗುವಳಿ ಮಾಡಲು ನನಗೆ ಏನಾದರೂ ತೊಂದರೆ ಇದೆಯಾ ಎಂದರೆ ನಾನು ಗುತ್ತಿಗೆಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ಯಾವ ವರ್ಷದಿಂದ ಯಾವ ವರ್ಷದವರೆಗೆ ದಾವಾ ಆಸ್ತಿಗಳನ್ನು ಗುತ್ತಿಗೆಗೆ ನೀಡಿದ್ದೇನೆ ಎಂದರೆ 1985 ರಲ್ಲಿ ಇರಬಹುದು ಆದರೆ ಈಗ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಗುತ್ತಿಗೆಗೆ ನೀಡಿದ್ದೇನೆ ಎಂದು ಹೇಳಲಾದ ವ್ಯಕ್ತಿಗಳನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಿಸಲು ಆಗುತ್ತದ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಇದ್ದಾಗ ಗುತ್ತಿಗೆಗೆ ನೀಡಿದ್ದೆವು ಈಗ ಇಲ್ಲ ಎಂದು ನುಡಿಯುತ್ತಾರೆ. ವಾದಪತ್ರದ ಪ್ಯಾರಾ 3 ರಲ್ಲಿ ಪ್ರತಿವಾದಿ 2 ಮತ್ತು 3 ರವರಿಗೆ ದಾವಾ ಸ್ವತ್ತುಗಳ ನಿರ್ವಹಣೆ ಮತ್ತು ವ್ಯವಸಾಯ ಮಾಡುವುದಕ್ಕೆ ನೀಡಿದ್ದೇವೆ ಎಂದು ಹೇಳಿದ್ದು ಈಗ ಬೇರೆಯವರಿಗೆ ಗುತ್ತಿಗೆಗೆ ನೀಡಿದ್ದೆವು ಎಂದು ಹೇಳಿದ್ದು ಇದರಲ್ಲಿ ಯಾವುದು ಸರಿ

ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.1 ರ ಆಸ್ತಿಯ ಬಗ್ಗೆ ನಿಪಿ 7 ಬಳುವಳಿ ಪತ್ರದ ಯಾವ ಸಾಲಿನಲ್ಲಿ ನಮೂದಿಸಿದ್ದಾರೆ ಎಂದರೆ ಗೊತಾಗವುದಿಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ